ವಿಶ್ವವಾಣಿ @vishwavaninews vishwavanitimely
ಶನಿವಾರ

# ವಿಶ್ವ ಯಾತ್ರಾ

...ಮ್ಮ ಸಹ ಪ್ರಯಾಣಿಕ



ವಿಜಯ್ ಸೂರ್ಯಗೆ ಮನೆಯೇ ಮಂತ್ರಾಲಯವಂತೆ..!



...CKAGE

..., ಲಡಾಕ್



...ರಜೆಗೆ ಮಕ್ಕಳೊಡನೆ ಪ್ರವಾಸಕ್ಕೆ ಹೋಗಲು ...ರೈದ ಒಂದು ಸ್ಪೆಶಲ್ ಪ್ಯಾಕೇಜ್.

...ಎಲ್ಲೆಲ್ಲಿ?

...gh





## ಸರೋವರಗಳ ನಗರ ಉದಯಪುರ






» ಸುಷ್ಮಾ ಪವಾರ
yatra@vishwavani.news

ರಾಜಸ್ಥಾನ ಎಂದಾಗ ನೀರು, ಇಲ್ಲದ ನಾಡು ಎಂಬ ಕಲ್ಪನೆ ಮೂಡುತ್ತದೆ. ರಾಜ್ಯದ ದಕ್ಷಿಣದಲ್ಲಿರುವ ಉದಯಪುರ ನೋಡಿದರೆ ಈ ಊಹೆ ತಲೆಕೆಳಗಾಗುವುದರಲ್ಲಿ ಸಂಶಯವಿಲ್ಲ. ಇಲ್ಲಿ ಎಲ್ಲೆಲ್ಲೂ ಮರ, ಗಿಡ, ಸರೋವರಗಳೇ. ಇದು ದೇಶದ ಸುಂದರ ನಗರಗಳಲ್ಲೊಂದು!

ರಾಜಸ್ಥಾನ ಮತ್ತು ಗುಜರಾತ್‌ನ ಗಡಿಭಾಗದಲ್ಲಿರುವ ಉದಯಪುರಕ್ಕೆ ಸರೋವರಗಳ ನಗರವೆಂಬ ಉಪನಾಮವೂ ಇದೆ. ಭೌಗೋಳಿಕವಾಗಿ ಇದು ಅರಾವಳಿ ಬೆಟ್ಟಗಳಿಂದ ಸುತ್ತುವರಿದಿದೆ. ಥಾರ್ ಮರುಭೂಮಿಯಿಂದ ಬೇರ್ಪಟ್ಟಿದೆ. ದೇಶದ ಇತರ ದೊಡ್ಡ ನಗರಗಳಿಗೆ ರೈಲು, ವಿಮಾನ ಮತ್ತು ಹೆದ್ದಾರಿಗಳ ಮೂಲಕ ಸಂಪರ್ಕ ಹೊಂದಿದೆ.

ಉದಯಪುರದಲ್ಲಿ ಪ್ರವಾಸಿಗರ ಮನ ಸೆಳೆಯುವ ಕೋಟೆಗಳು, ಅರಮನೆಗಳು, ಸಂಗ್ರಹಾಲಯದಗಳು, ಉದ್ಯಾನಗಳು, ದೇವಾಲಗಳು, ಸರೋವರಗಳು ಇವೆ. ಸುತ್ತಮುತ್ತ 12 ಸರೋವರಗಳಿವೆ. ಫತೇಹ ಸಾಗರ, ಪಿಚೋಲ, ಸ್ವರೂಪ್ ಸಾಗರ, ರಂಗ್ ಸಾಗರ, ದೂಧ್ ತಲೈ ಮುಖ್ಯವಾದವುಗಳು. ಹೆಚ್ಚಿನ ಅರಮನೆಗಳೆಲ್ಲವೂ ಈಗ ವಿಶ್ವ ಪ್ರಸಿದ್ಧ ಹೊಟೇಲ್‌ಗಳಾಗಿವೆ.

ರಾಜಸ್ಥಾನದ ಮೇವಾಡ ರಾಜರಿಗೆ ಚಿತ್ತೋರಗಢ ರಾಜಧಾನಿಯಾಗಿತ್ತು. ಮೊಘಲ್‌ರ ದಾಳಿಯಿಂದ ತಪ್ಪಿಸಿಕೊಳ್ಳಲು ಅರಾವಳಿ ಬೆಟ್ಟಗಳಿಂದ ಸುತ್ತುವರಿದ, ದುರ್ಗಮ ಜಾಗದಲ್ಲಿರುವ ಉದಯಪುರವನ್ನು ರಾಜಧಾನಿಗೆ ಆಯ್ದುಕೊಂಡಿದ್ದು ಪ್ರಸಿದ್ಧ ಮೇವಾಡದ ಮಹಾರಾಣಾ ಉದಯ ಸಿಂಘ್-11. ಉದಯಪುರದ ಸುತ್ತ ಸುಮಾರು 6 ಕಿಮೀ ಉದ್ದದ ಗೋಡೆ ಇದೆ. ಗೋಡೆಗೆ ಒಟ್ಟು ಏಳು ಬಾಗಿಲುಗಳಿವೆ.



### ಸಿಟಿ ಪ್ಯಾಲೇಸ್

ಭಾರತದ ಅತೀ ದೊಡ್ಡ ಮತ್ತು ಸುಂದರ ಅರಮನೆಗಳಲ್ಲೊಂದು. ಈ ಅರಮನೆ ಸಂಕೀರ್ಣ 400 ವರ್ಷಗಳ ಕಾಲದಲ್ಲಿ ಹಲವು ಮೇವಾಡ ಅರಸರುಗಳಿಂದ ಕಟ್ಟಲ್ಪಟ್ಟಿದೆ. ಮೊಘಲ್ ಮತ್ತು ರಾಜಸ್ಥಾನಿ ವಾಸ್ತುಶಿಲ್ಪದ ಸುಂದರ ಸಮ್ಮಿಲನದ ಅರಮನೆ ಪಿಚೋಲ ಸರೋವರದ ದಂಡೆಯ ಮೇಲಿದೆ. ಇದಕ್ಕೆ ಗ್ರಾನೈಟ್ ಮತ್ತು ಅಮೃತ ಶಿಲೆಯನ್ನು ಬಳಸಲಾಗಿದೆ. ಒಳ ಆವರಣ ಬಣ್ಣದ ಗಾಜಿನ ಅಲಂಕಾರ, ಬೆಳ್ಳಿಯಿಂದ ಮಾಡಿದ ಕುಸುರಿ ಮತ್ತು ವರ್ಣಚಿತ್ರಗಳಿಂದ ಕೂಡಿದೆ. ಅರಮನೆಯ ಸಂಕೀರ್ಣದಲ್ಲಿ ಹಲವು ಚಿಕ್ಕ ಅರಮನೆಗಳಲ್ಲದೆ, ದೇವಾಲಯಗಳು, ಆವರಣ, ಭಾವಣಿಗಳು, ಈಜುಕೊಳ, ಉದ್ಯಾನಗಳಿವೆ, ಹಲವು ಕಡೆ ಸಾರ್ವಜನಿಕರಿಗೆ ಪ್ರವೇಶವಿದೆ. ಅರಮನೆಯ ಗೋಡೆಗಳಲ್ಲಿ ಕೆಲವು ಕಡೆ ಹೊಳೆಯುವ ಹಿತ್ತಾಳೆಯಿಂದ ಮಾಡಿದ ಸೂರ್ಯನ ಮುಖದ ಲಾಂಛನವಿದೆ. ಮೇವಾಡದ ರಾಜರು ಸೂರ್ಯನ ಆರಾಧಕರು ಬೆಳಗ್ಗೆ ಉಪ ಹಾರದ ಮೊದಲ ಸೂರ್ಯ ದರ್ಶನ ಮತ್ತು ಪೂಜೆ ಆಗಲೇಬೇಕಿತ್ತು.

ಮೋರ್ ಚೌಕ್‌ನ ಗೋಡೆಯೊಂದರಲ್ಲಿ ಮೂರು ನವಿಲಿನ ಚಿತ್ರವಿದೆ. ಹಸಿರು, ನೀಲಿ ಮತ್ತು ಚಿನ್ನದ ಬಣ್ಣವಿರುವ ಐದು ಸಾವಿರ ಗಾಜಿನ ಚೂರುಗಳಿಂದ ಅಲಂಕಾರ ಮಾಡಲಟ್ಟಿದೆ.

ಇಲ್ಲಿ, ಸುಂದರವಾದ ಕಾರಂಜಿಯಿರುವ ಉದ್ಯಾನ, ಗೋಪುರ ಮತ್ತು ಪಾರಸಿಯಿದೆ. ಅರಮನೆಯ ಸಂಕೀರ್ಣ ದೊಡ್ಡದಿದ್ದರೂ ಮೆಟ್ಟಿಲುಗಳು ಚಿಕ್ಕವು. ಆವರಣಗಳೂ ಅಂಕುಡೊಂಕಾಗಿವೆ. ಇದು ಶತ್ರುಗಳು ಸುಲಭದಲ್ಲಿ ಒಳಗೆ ನುಗ್ಗದಂತೆ ಮತ್ತು ದಾರಿ ತಪ್ಪಿಸಲು ಮಾಡಿದ ಉಪಾಯವೆನ್ನುತ್ತಾರೆ. ಅರಮನೆಯ ಮೇಲಿನ ಚಾವಣಿಯಿಂದ ಉದಯಪುರ ನಗರ ಮತ್ತು ಸುತ್ತ ಇರುವ ಸರೋವರಗಳನ್ನೂ ನೋಡಬಹುದು.

ಸಂಕೀರ್ಣದಲ್ಲಿರುವ 2 ದೊಡ್ಡ ಅರಮನೆಗಳು ಹೊಟೇಲ್‌ಗಳಾಗಿವೆ. ಸಂಕೀರ್ಣದಲ್ಲಿ ಈಗ ಪೋಸ್ಟ್ ಆಫೀಸ್, ಬ್ಯಾಂಕ್, ಟ್ರಾವೆಲ್ ಏಜನ್ಸಿ, ಚಿಕ್ಕ ಪುಟ್ಟ ಅಂಗಡಿಗಳಿವೆ. ಅರಮನೆಯ ಒಂದು ಭಾಗವನ್ನು ಸಂಗ್ರಹಾಲಯವಾಗಿ, ಆಗಿನ ಕಾಲದ ಪಾತ್ರೆಗಳು, ಯುದ್ಧ ಸಾಮಗ್ರಿಗಳು, ಪೇಂಟಿಂಗ್‌ಗಳು, ಪೀಠೋಪಕರಣಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಈಗ ಅರಮನೆ ಸಂಕೀರ್ಣ ಮೇವಾಡ ರಾಜ ಮನೆತನದ ಅಧೀನದಲ್ಲಿದೆ. ಇದು ವಿವಿಧ ಟ್ರಸ್ಟ್‌ಗಳ ಉಸ್ತುವಾರಿಯಲ್ಲಿದೆ.

### ಲೇಕ್ ಪ್ಯಾಲೇಸ್


ಲೇಕ್ ಪ್ಯಾಲೇಸ್ ಬೇಸಿಗೆ ಅರಮನೆ ಪಿಚೋಲ್ ಸರೋವರದ ಮಧ್ಯದಲ್ಲಿರುವ ಜಗ ನಿವಾಸ ದ್ವೀಪ್‌ದಲ್ಲಿದೆ. ಪೂರ್ವ ದಿಕ್ಕಿಗೆ ಮುಖ ಮಾಡಿಕೊಂಡಿರುವ ಅರಮನೆಗೆ ಕಪ್ಪು, ಬಿಳಿ ಅಮೃತ ಶಿಲೆ ಬಳಸಲಾಗಿದೆ. ಗೋಡೆಗಳಿಗೆ ಬೆಲೆ ಬಾಳುವ ಹರಳುಗಳು ಅಲಂಕಾರವಿದೆ. ಈಗ ಇದು ಪಂಚತಾರಾ ತಾಜ್ ಹೊಟೇಲ್! ಸಾಮಾನ್ಯ ಜನರಿಗೆ ಪ್ರವೇಶವಿಲ್ಲ, ಹೊಟೇಲ್‌ಗೆ ಮೋಟಾರ್ ಬೋಟ್ ಮೂಲಕ ಹೋಗುವ ವ್ಯವಸ್ಥೆ ಇದೆ.

### ಫತೇಹ್ ಸಾಗರ ಸರೋವರ

ಇದೊಂದು ಮಾನವ ನಿರ್ಮಿತ ಸರೋವರ. ಇದನ್ನು ಮೊದಲಿಗೆ ರೂಪಿಸಿದ್ದು ಮಹಾರಾಣಾ ಜೈ ಸಿಂಘ್. ರಾಜ ಫತೇಹ ಸಿಂಘ್ ಇದನ್ನು ನವೀಕರಿಸಿ ಇದರ ಉದ್ದ, ಅಗಲವನ್ನು ಜಾಸ್ತಿ ಮಾಡಿದ. ಹೀಗಾಗಿ ಫತೇಹ ಸಿಂಘನ ಹೆಸರನ್ನೇ ಸರೋವರದ ಮಧ್ಯದಲ್ಲಿ ಮೂರು ದ್ವೀಪಗಳಿವೆ. ಅವುಗಳಲ್ಲಿ ಪಾರ್ಕ್, ಪ್ರಾಣಿ ಸಂಗ್ರಹಾಲಯ ಕಾರಂಜಿ ಮತ್ತು ಸೌರ ವೀಕ್ಷಣಾಲಯವಿದೆ. 2017ರಲ್ಲಿ ಅಂಡರ್ ಸನ್ ಎಂಬ ಅಕ್ವೇರಿಯಂ ಅನ್ನು ಇಲ್ಲಿ ಉದ್ಘಾಟಿಸಲಾಯಿತು.

### ಪಿಚೋಲ ಸರೋವರ

ಇದು ನಗರದ ಮಧ್ಯ ಭಾಗದಲ್ಲಿದೆ. ಉದಯಪುರದ ಅತಿ ದೊಡ್ಡ ಸರೋವರವಿದು. ಇದರ ಸುತ್ತ ಅರಮನೆಗಳು, ದೇವಾಲಯಗಳು, ಸ್ನಾನದ ಘಾಟ್‌ಗಳು ಇವೆ. ಸರೋವರದಲ್ಲಿ ಹಲವು ಮುಳುಗುವ ಸಮಯದಲ್ಲಿ ಈಸರೋವರದ ದೋಣಿ ಪಯಣ ಮರೆಯಲಾಗದ ಅನುಭವ ಕೊಡುತ್ತದೆ. ರಾತ್ರಿಯಲ್ಲಿ ಅರಮನೆಯ ಜಗಮಗಿಸುವ ದೀಪಗಳ ಬಿಂಬ ಸರೋವರದಲ್ಲಿ ಸುಂದರ ದೃಶ್ಯ ಮೂಡಿಸುತ್ತದೆ.



**How to Go**

- ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ, ರಾಜಸ್ಥಾನದ ಉದಯಪುರ ಮಹರಾಣಾ ಪ್ರತಾಪ್ ಏರ್‌ಪೋರ್ಟ್‌ಗೆ ವಿಮಾನ ಸೌಲಭ್ಯವಿದೆ. ರೈಲಿನಲ್ಲಿ ಸಂಚರಿಸುವುದಾದರೆ, ಬೆಂಗಳೂರಿನಿಂದ ಬಹಳಷ್ಟು ರೈಲುಗಳು ಉದಯಪುರಕ್ಕೆ ಸಂಚರಿಸುತ್ತವೆ. ರಸ್ತೆ ಮಾರ್ಗದಲ್ಲಿ ಸಾಗುವವರಿಗೆ ಬಸ್ ಸೌಲಭ್ಯವೂ ಇದೆ.

### ಮೋತಿ ಮಾಗ್ರಿ

ಇದೊಂದು ಚಿಕ್ಕ ಬೆಟ್ಟ ತುದಿಯಲ್ಲಿ ರಾಜಪೂತ ದೊರೆ ಮಹಾರಾಣಾ ಪ್ರತಾಪ ಮತ್ತು ಅವನ ಕುದುರೆ ಚೇತಕ್‌ನ ಕಂಚಿನ ಪ್ರತಿಮೆಯಿದೆ. ಬೆಟ್ಟದ ಮೇಲಿನಿಂದ ಫತೇಹ ಸಾಗರ ಸರೋವರವದ ಸುಂದರ ದೃಶ್ಯವನ್ನು ನೋಡಬಹುದು. ಇಲ್ಲಿಂದ ಉದಯಪುರ ಸಿಟಿನೋಡುವುದೇ ಚೆಂದ.

ಉಯಯಪುರ ಸಂದರ್ಶಿಸಲು ಅಕ್ಟೋಬರ್ ಡಿಸೆಂಬರ್, ಫೆಬ್ರುವರಿ ಮತ್ತು ಮಾರ್ಚ್ ಸೂಕ್ತ ಸಮಯ. ಜನವರಿ ಅತಿ ಚಳಿ, ಗಾಳಿಯಿಂದ ಕೂಡಿದ್ದರೆ, ಮಾರ್ಚ್ ಮಧ್ಯಭಾಗದಿಂದ ಆಗಸ್ಟ್ ಅಂತ್ಯದವರೆಗೆ ಸೆಖೆ, ಬಿಸಿಗಾಳಿ ಮತ್ತು ಒಣ ಹವೆಯಿರುತ್ತದೆ. ಪ್ರವಾಸದ ಸಂದರ್ಭದಲ್ಲಿ ಸ್ಥಳೀಯ ಆಹಾರವೈವಿಧ್ಯ ದಾಲ್ ಭಾಟಿ ಚುರ್ಮ, ಘಟ್ಟೆ ಕೀ ಸಬ್ಜಿ, ಬಾಜ್ರೆ ಕೀ ರೋಟಿ, ಗೇವರ್ ಸವಿಯಲು ಮರೆಯದಿರಿ.

### ಹಳದಿ ಘಾಟ್

ಇದು ಅರವಾಳಿ ಪರ್ವತ ಶ್ರೇಣಿಯಲ್ಲಿರುವ ಕಣಿವೆ ಪ್ರದೇಶ. ಉದಯಪುರದಿಂದ 40 ಕಿಮೀ ದೂರದಲ್ಲಿದೆ. ಇಲ್ಲಿನ ಮಣ್ಣು ಮಾಸಲು ಹಳದಿ ಬಣ್ಣದ್ದಾಗಿರುವುದರಿಂದ ಈ ಜಾಗಕ್ಕೆ ಹಳದಿ ಘಾಟ್ ಎಂಬ ಹೆಸರು ಬಂತು. 1576ರಲ್ಲಿ ಮಹಾರಾಣಾ ಪ್ರತಾಪ ಮತ್ತು ಮೊಘಲ್ ಸೈನಿಕರ ಭೀಕರ ಯುದ್ಧ ನಡೆದ ಜಗವಿದು. ಯುದ್ಧದಲ್ಲಿ ರಾಣಾ ಪ್ರತಾಪ ಹಿನ್ನಡೆ ಸಾಧಿಸಿದರೂ ಮಹಾರಾಣಾ ಪ್ರತಾಮನ ಪೌರುಷ ಮತ್ತು ಅವನ ಕುದುರೆ ಚೇತಕ್‌ನ ಸ್ವಾಮಿಭಕ್ತಿ ಜನಮಾನಸದಲ್ಲಿ ಉಳಿದಿದೆ. ಯುದ್ಧದಲ್ಲಿ ಗಾಯಳುವಾದರೂ ಸುಮಾರು ಐದು ಮೈಲಿ ಮಹಾರಾಣಾ ಪ್ರತಾಪವನ್ನು ಹೊತ್ತು, ಸೊರೆ ಹಾರಿ ತನ್ನ ದೊರೆಯನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿ ಪ್ರಾಣ ಬಿಟ್ಟ ಕುದುರೆ ಚೇತಕ್ ಇಲ್ಲಿ ಹೀರೊ. ಚೇತಕ್ ಪ್ರಾಣ ಬಿಟ್ಟ ಜಾಗದಲ್ಲಿ ಒಂದು ಸ್ಮಾರಕವಿದೆ.

### ಮಹಾರಾಣಾ ಪ್ರತಾಪ ಮ್ಯೂಸಿಯಂ

ಇದು ಉದಯಪುರದಿಂದ 30ಕಿಮೀ ದೂರದಲ್ಲಿದೆ. ಮ್ಯೂಸಿಯಂನ ಹೊರಗೆ ಆಕರ್ಷಕವಾದ ಮಹಾರಾಣಾ ಪ್ರತಾಪನ ಆನೆ. ಕುದುರೆಗಳ ಕಂಚಿನ ಮೂರ್ತಿಗಳಿವೆ. ಮ್ಯೂಸಿಯಂನ ಒಳಗೆ ಮಹಾರಾಣಾ ಪ್ರತಾಪನ ಜೀವನ ಚರಿತ್ರೆಯನ್ನು ತೋರಿಸುವ ಸಾಕ್ಷ್ಯ ಚಿತ್ರ, ವರ್ಣಚಿತ್ರಗಳು ಮತ್ತು ಅವನ ಜೀವನದಲ್ಲಿ ನಡೆದ ಹಲವು ಘಟನೆಗಳನ್ನು ತೋರಿಸುವ ಆಳೆತ್ತರದ ಮೂರ್ತಿಗಳಿವೆ. ಮ್ಯೂಸಿಯಂ ಕಟ್ಟಿದ ರೀತಿ ನಿರ್ವಹಣೆ ಗಮನಿಸಿದರೆ ಮ್ಯೂಸಿಯಂ ಅಂದರೆ ಹೀಗಿರಬೇಕು ಎನ್ನುವಂತಿದೆ.

Scanned with CamScanner